ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 18 ನೇ ಮಾರ್ಚ್, 2020

ಚಾಮುಂಡೇಶ್ವರಿ ಬ್ಯುಲ್ಡ್ ಟೆಕ್ ಕಂಪನಿ ಜಾಗ ಒತ್ತುವರಿ ಕುರಿತು

ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-

1201 (1333) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಚಾಮುಂಡೇಶ್ವರಿ ಬ್ಯುಲ್ಡ್ ಟೆಕ್ ಕಂಪನಿ ರಾಮನಗರ ಜಿಲ್ಲೆಯ ಬಿಡದಿ ಹೋಬಳಿ, ಶಾನಮಂಗಲ, ಬಿಲ್ಲ, ಕೆಂಪನ ಹಳ್ಳಿ ಮತ್ತು ಬಾಣಂದೂರು ಗ್ರಾಮಗಳಲ್ಲಿ 106 ಎಕರೆ 12 ಗುಂಟೆ ಜಮೀನು ಒತ್ತುವರಿ ಮಾಡಿದ್ದು, ತೆರವುಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಈ ಕಂಪನಿಯ ಮಾಲೀಕರು ಮತ್ತು ಪ್ರವರ್ತಕರು ಯಾರು;

(ಆ) ಚಾಮುಂಡೇಶ್ವರಿ ಬ್ಯುಲ್ಡ್ ಟೆಕ್ ಕಂಪನಿ ಒತ್ತುವರಿ ಮಾಡಿದ ಜಾಗಕ್ಕೆ 982 ಕೋಟಿಯನ್ನು ಸರ್ಕಾರಕ್ಕೆ ಪಾವತಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯ ಆದೇಶ ಮಾಡಿದ್ದರೂ ಇದುವರೆಗೆ ಸದರಿ ಮೊತ್ತವನ್ನು ವಸೂಲಿ ಮಾಡದಿರಲು ಕಾರಣವೇನು; ಈ ಮೊತ್ತವನ್ನು ಪಾವತಿಸುವಂತೆ ಕೋರಿ ಎಷ್ಟು ಬಾರಿ ನೋಟಿಸ್ ನೀಡಲಾಗಿದೆ;

(ಇ) ಒತ್ತುವರಿ ಮಾಡಿರುವ ಜಾಗದಲ್ಲಿ ಯಾವ ಆಧಾರದ ಮೇಲೆ ಯಾವ ಕಾನೂನಿನನ್ವಯ ವ್ಯವಹಾರ ಮಾಡಲು ಅನುಮತಿ ನೀಡಲಾಗಿದೆ; ಅನುಮತಿ ನೀಡಿದ್ದಲ್ಲಿ, ಸದರಿ ಅನುಮತಿಯನ್ನು ರದ್ದುಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ; ಒತ್ತುವರಿ ಜಾಗದಲ್ಲಿ ಆರ್ಥಿಕ ವ್ಯವಹಾರ ನಡೆಸಲು ಅನುಮತಿ ನೀಡಿದವರು ಯಾರು;

(ಈ) ಇತರೆ ಒತ್ತುವರಿದಾರರು ಸಹ ಸರ್ಕಾರಕ್ಕೆ ನಿಗಧಿಪಡಿಸಿದ ಮೌಲ್ಯ ಪಾವತಿಸಿದ್ದಲ್ಲಿ ಸರ್ಕಾರಿ ಜಾಗವನ್ನು ಒತ್ತುವರಿದಾರರಿಗೆ ನೀಡಬಹುದೆಂಬ ನಿಯಮವಿದೆಯೇ; ಈಗಲ್ ಟನ್ ರೆಸಾರ್ಟ್‌ಗೆ ನೀಡಿರುವ ಈ ಸೌಲಭ್ಯವನ್ನು ಇತರೆ ಭೂ ಒತ್ತುವರಿದಾರರಿಗೂ ನೀಡುವ ಕುರಿತು ಸರ್ಕಾರದ ನಿಲುವೇನು?